ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಗುರುವಾರ, ೨೫ ಸೆಪ್ಟೆಂಬರ್, ೨೦೨೫ (ಆಶ್ವಯುಜ ೦೩, ಶಕವರ್ಷ ೧೯೪೭) BENGALURU, THURSDAY, 25 SEPTEMBER, 2025 (AASHWAYUJA 03, SHAKAVARSHA 1947)	ಸಂಚಿಕೆ ೧೮೭ Issue 187

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 71 ಎಫ್ಎಎಫ್ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:19.09.2025

ಅಧಿಸೂಚನೆ

ಕರ್ನಾಟಕ ಅರಣ್ಯ ಅಧಿನಿಯಮ 1963ರ ಕಲಂ-33 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕು, ಗುಂಜಿ ಹೋಬಳಿ, ಹೊಳದಾ ಗ್ರಾಮ, ಸರ್ವೆ ನಂ. 7, 8/1, 8/2, 8/3 ಮತ್ತು 4 ಗಳ 171 ಎಕರೆ 30 ಗುಂಟೆ (69.504 ಹೆಕ್ಟೇರ್) ಪ್ರದೇಶವನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, **"ರಕ್ಷಿತ ಅರಣ್ಯ"** ಎಂದು ಕರ್ನಾಟಕ ಸರ್ಕಾರವು ಘೋಷಿಸುತ್ತದೆ.

ಅನುಸೂಚಿ

ಕ್ಷೇತ್ರದ ಹೆಸರು	: ಹೊಳದಾ ರಕ್ಷಿತ ಅರಣ್ಯ
ಜಿಲ್ಲೆಯ ಹೆಸರು	: ಬೆಳಗಾವಿ
ತಾಲ್ಲೂಕಿನ ಹೆಸರು	: ಖಾನಾಪುರ
ಹೋಬಳಿ ಹೆಸರು	: ಗುಂಜಿ
ಗ್ರಾಮದ ಹೆಸರು	: ಹೊಳದಾ (ಗ್ರಾಮ ನಕಾಶೆಯಂತೆ ಹೊಳಂದೆ)
ಕ್ಷೇತ್ರದ ಸರ್ವೆ ನಂಬರ್	:

ಕ್ಷೇತ್ರ-1

ಸರ್ವೆ. ನಂ.	ಕ್ಷೇತ್ರ (ಎ-ಗು)	ಕ್ಷೇತ್ರ (ಹೆ.ಗಳಲ್ಲಿ)
8/1	26-38	10.906
8/2	26-38	10.906
8/3	114-37	46.509
7	00-26	0.263
ಒಟ್ಟು	169-19	68.584

	ಕ್ಷೇತ್ರ-2		
	4	2-11	0.920
	ಒಟ್ಟು	2-11	0.920
	ಅಂತೂ ಒಟ್ಟು	**171-30**	**69.504**
ವಿಸ್ತೀರ್ಣ ಎಕರೆ – ಗುಂಟೆ ಗಳಲ್ಲಿ	: 171 ಎಕರೆ 30 ಗುಂಟೆ (69.504 ಹೆಕ್ಟೇರ್)		

ವಿಶೇಷ ಸೂಚನೆ:

1887 ರ ಪೂರ್ವದ ಸರ್ವೆ ನಂಬರ್	3	9	10
ಪ್ರಸ್ತುತ ಸರ್ವೆ ನಂಬರ್	4	8	7

ಸೀಮಾ ವಿವರಣೆ

ಕ್ಷೇತ್ರ-1

ಉತ್ತರ ಮತ್ತು ಪೂರ್ವ: ಅರಣ್ಯ ಕ್ಷೇತ್ರದ ಪ್ರಾರಂಭ ಬಿಂದುವು ಹೊಳದಾ ಗ್ರಾಮದ ಸರ್ವೆ ನಂಬರ್ 8, 10 ಮತ್ತು ಗೊವಾ ರಾಜ್ಯದ ಹೊಂಗಿನಿ ಗ್ರಾಮದ ಕೂಡು ಬಿಂದುವಾಗಿದ್ದು. ಸೀಮಾರೇಖೆಯು ಪ್ರಾರಂಭ ಬಿಂದುವಿನಿಂದ ಆಗ್ನೇಯಾಭಿಮುಖವಾಗಿ ಸರ್ವೆ ನಂಬರ್ 8/3 ಮತ್ತು 10 (ಹೊಳದಾ ಮೀಸಲು ಅರಣ್ಯ ಗಡಿ) ಗಳ ಗಡಿಯೊಂದಿಗೆ ಸಾಗಿ, ಹೊಳದಾ ಗ್ರಾಮದ ಸರ್ವೆ ನಂಬರ್ 7ರ ಉತ್ತರ ಗಡಿಯಲ್ಲಿ, ಸರ್ವೆ ನಂಬರ್ 7, 8/3 ಮತ್ತು 10 ಗಳ ಕೂಡು ಬಿಂದುವನ್ನು ತಲುಪುತ್ತದೆ. ನಂತರ ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ಆಗ್ನೇಯಾಭಿಮುಖವಾಗಿ ಮತ್ತು ನೈರುತ್ಯಾಭಿಮುಖವಾಗಿ ಹೊಳದಾ ಗ್ರಾಮದ ಸರ್ವೆ ನಂಬರ್ 7 ಮತ್ತು 10 (ಹೊಳದಾ ಮೀಸಲು ಅರಣ್ಯ ಗಡಿ) ಗಳ ಗಡಿಯೊಂದಿಗೆ ಸಾಗಿ, ಹೊಳದಾ ಗ್ರಾಮದ ಸರ್ವೆ ನಂಬರ್ 7ರ ದಕ್ಷಿಣ ಗಡಿಯಲ್ಲಿನ ಬಿಂದುವನ್ನು ತಲುಪುತ್ತದೆ. ನಂತರ ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ನೈರುತ್ಯಾಭಿಮುಖವಾಗಿ ಹೊಳದಾ ಗ್ರಾಮದ ಸರ್ವೆ ನಂಬರ್ 8/3 ಮತ್ತು 10 (ಹೊಳದಾ ಮೀಸಲು ಅರಣ್ಯ ಗಡಿ) ಗಳ ಗಡಿಯೊಂದಿಗೆ ಸಾಗಿ, ಹೊಳದಾ ಗ್ರಾಮದ ಸರ್ವೆ ನಂಬರ್ 8/3, 10 ಮತ್ತು 1 ಗಳ ಕೂಡು ಬಿಂದುವನ್ನು ತಲುಪುತ್ತದೆ.

ದಕ್ಷಿಣ: ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ವಾಯುವ್ಯಾಭಿಮುಖವಾಗಿ ಹೊಳದಾ ಗ್ರಾಮದ ಸರ್ವೆ ನಂಬರ್ 8/3 ಮತ್ತು 1 ಗಳ ಗಡಿಯೊಂದಿಗೆ ಸಾಗಿ, ಹೊಳದಾ ಗ್ರಾಮದ ಸರ್ವೆ ನಂಬರ್ 8/3, 1, 11 ಮತ್ತು 12 ಗಳ ಕೂಡು ಬಿಂದುವನ್ನು ತಲುಪುತ್ತದೆ. ನಂತರ ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ಪಶ್ಚಿಮಾಭಿಮುಖವಾಗಿ ಸರ್ವೆ ನಂಬರ್ 8 (8/3, 8/2, 8/1) ಮತ್ತು12 (ಹೊಳದಾ ಮೀಸಲು ಅರಣ್ಯ ಗಡಿ) ಗಳ ಗಡಿಯೊಂದಿಗೆ ಸಾಗಿ, ಹೊಳದಾ ಗ್ರಾಮದ ಸರ್ವೆ ನಂಬರ್ 8/1,12 ಮತ್ತು ಗೊವಾ ರಾಜ್ಯದ ಹೊಂಗಿನಿ ಗ್ರಾಮದ ಕೂಡು ಬಿಂದುವನ್ನು ತಲುಪುತ್ತದೆ.

ಪಶ್ಚಿಮ: ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ಈಶಾನ್ಯಾಭಿಮುಖವಾಗಿ ಸರ್ವೆ ನಂಬರ್ 8 (8/1, 8/2, 8/3) ಮತ್ತು ಗೊವಾ ರಾಜ್ಯದ ಹೊಂಗಿನಿ ಗ್ರಾಮದ ಗಡಿಯೊಂದಿಗೆ ಸಾಗಿ, ಪ್ರಾರಂಭ ಬಿಂದುವನ್ನು ತಲುಪುತ್ತದೆ.

ಕ್ಷೇತ್ರ-2

ಉತ್ತರ ಮತ್ತು ಪೂರ್ವ: ಅರಣ್ಯ ಕ್ಷೇತ್ರದ ಪ್ರಾರಂಭ ಬಿಂದುವು ಹೊಳದಾ ಗ್ರಾಮದ ಸರ್ವೆ ನಂಬರ್ 1, 10 ಮತ್ತು 11 ಗಳ ಕೂಡು ಬಿಂದುವಿನಿಂದ ಉತ್ತರ ದಿಕ್ಕಿನಲ್ಲಿ ಹೊಳದಾ ಗ್ರಾಮದ ಸರ್ವೆ ನಂಬರ್ 4 ರ ಉತ್ತರ ಗಡಿಯ ಬಿಂದುವಾಗಿದ್ದು, ಸೀಮಾರೇಖೆಯು ಪ್ರಾರಂಭ ಬಿಂದುವಿನಿಂದ ಆಗ್ನೇಯಾಭಿಮುಖವಾಗಿ ಮತ್ತು ನೈರುತ್ಯಾಭಿಮುಖವಾಗಿ ಸರ್ವೆ ನಂಬರ್ 4 ಮತ್ತು 1 ಗಳ ಗಡಿಯೊಂದಿಗೆ, ಹೊಳದಾ ಗ್ರಾಮದ ಸರ್ವೆ ನಂಬರ್ 1, 10 ಮತ್ತು 11 ಗಳ ಕೂಡು ಬಿಂದುವಿನಿಂದ ಈಶಾನ್ಯ ದಿಕ್ಕಿನಲ್ಲಿ ಸಂದಿಸುವ ಬಿಂದುವನ್ನು ತಲುಪುತ್ತದೆ.

ದಕ್ಷಿಣ: ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ಪಶ್ಚಿಮಾಭಿಮುಖವಾಗಿ ಹೊಳದಾ ಗ್ರಾಮದ ಸರ್ವೆ ನಂಬರ್ 4 ಮತ್ತು 1 ಗಳ ಗಡಿಯೊಂದಿಗೆ ಸಾಗಿ, ಹೊಳದಾ ಗ್ರಾಮದ ಸರ್ವೆ ನಂಬರ್ 1, 10 ಮತ್ತು 11 ಗಳ ಕೂಡು ಬಿಂದುವಿನಿಂದ ಉತ್ತರ ದಿಕ್ಕಿನಲ್ಲಿ ಸಂದಿಸುವ ಬಿಂದುವನ್ನು ತಲುಪುತ್ತದೆ.

ಪಶ್ಚಿಮ: ಸೀಮಾರೇಖೆಯು ಕೊನೆಯ ಗಡಿ ಬಿಂದುವಿನಿಂದ ವಾಯುವ್ಯಾಭಿಮುಖವಾಗಿ ಮತ್ತು ಈಶಾನ್ಯಾಭಿಮುಖವಾಗಿ ಸರ್ವೆ ನಂಬರ್ 4 ಮತ್ತು 1 ಗಳ ಗಡಿಯೊಂದಿಗೆ ಸಾಗಿ, ಪ್ರಾರಂಭ ಬಿಂದುವನ್ನು ತಲುಪುತ್ತದೆ.

ಹಕ್ಕು ಮತ್ತು ಬಾಧ್ಯತೆಗಳು

1. ಸದರಿ ಕ್ಷೇತ್ರದಲ್ಲಿ ಯಾವುದೇ ಹಕ್ಕುಗಳನ್ನು ಮಾನದಂಡಗಳ ಹಿನ್ನೆಲೆಗಳಲ್ಲಿ ಕಾಯ್ದಿರಿಸಿರುವುದಿಲ್ಲ.
2. ಪ್ರಸ್ತಾಪಿತ ಪ್ರದೇಶದಲ್ಲಿ ಯಾವುದೇ ಸಾರ್ವಜನಿಕರ ಧಾರ್ಮಿಕ ಕಟ್ಟಡಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೀತಾ ಎಂ.ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

PR-1043

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 47 ಎಫ್‌ಎಎಫ್ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:26.08.2025

ಅಧಿಸೂಚನೆ

ಕರ್ನಾಟಕ ಅರಣ್ಯ ಅಧಿನಿಯಮ 1963 ರ ಕಲಂ-33 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ನುಗ್ಗಲಾಪುರ ಗ್ರಾಮದ ಸರ್ವೆ ನಂ.08 ರಲ್ಲಿ 5.00 ಹೆಕ್ಟೇರ್ ಪ್ರದೇಶವನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, **"ನುಗ್ಗಲಾಪುರ ರಕ್ಷಿತ ಅರಣ್ಯ"** ಎಂದು ಕರ್ನಾಟಕ ಸರ್ಕಾರವು ಘೋಷಿಸುತ್ತದೆ.

ಅನುಸೂಚಿ

ಕ್ಷೇತ್ರದ ಹೆಸರು	: ನುಗ್ಗಲಾಪುರ ರಕ್ಷಿತ ಅರಣ್ಯ
ಜಿಲ್ಲೆಯ ಹೆಸರು	: ಕೋಲಾರ
ತಾಲ್ಲೂಕಿನ ಹೆಸರು	: ಕೋಲಾರ
ಹೋಬಳಿ ಹೆಸರು	: ವಕ್ಕಲೇರಿ
ಗ್ರಾಮದ ಹೆಸರು	: ನುಗ್ಗಲಾಪುರ
ಕ್ಷೇತ್ರದ ಸರ್ವೆ ನಂಬರ್	: 8
ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ	: 5.00 ಹೆಕ್ಟೇರ್

ಸೀಮಾ ವಿವರಣೆ

ಉತ್ತರ: ಆರಂಭಿಕ ಸ್ಥಾನವು ನುಗ್ಗಲಾಪುರ ಗ್ರಾಮದ ಸರ್ವೆ ನಂ-9ರ ಆಗ್ನೇಯ ಮೂಲೆಯಿಂದ ಆಗ್ನೇಯ ದಿಕ್ಕಿಗೆ 41 ಮೀಟರ್ ಮತ್ತು ಅದೇ ಗ್ರಾಮದ ಸರ್ವೆ ನಂ.75ರ ನೈರುತ್ಯ ಮೂಲೆಯಿಂದ ದಕ್ಷಿಣಕ್ಕೆ 101.5 ಮೀಟರ್ ಅಂತರದಲ್ಲಿ ಸರ್ವೆ ನಂ.8 ರಲ್ಲಿ ಸ್ಥಾನಿಕ ಬಿಂದು 01 (N 13° 9.051′ E 78 ° 3.634′) ರಿಂದ ಆರಂಭವಾಗಿ, ಪೂರ್ವಾಭಿಮುಖವಾಗಿ ಸರ್ವೆ ನಂ.8 ರಲ್ಲಿ 64.5 ಮೀಟರ್ ಚಲಿಸಿ ಸರ್ವೆ ನಂ.75ರ ನೈರುತ್ಯ ಮೂಲೆಯಿಂದ ಆಗ್ನೇಯಾಭಿಮುಖವಾಗಿ 101 ಮೀಟರ್ ಅಂತರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 2 ಅನ್ನು (N 13 ° 09.057′ E 78 ° 3.669′) ಸೇರುತ್ತದೆ. ಮುಂದುವರೆದು, ಸರ್ವೆ ನಂ.8 ರಲ್ಲಿ ಆಗ್ನೇಯಾಭಿಮುಖವಾಗಿ 38

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಮೀಟರ್ ಚಲಿಸಿ ಸದರಿ ಗ್ರಾಮದ ಸರ್ವೆ ನಂ.75ರ ಆಗ್ನೇಯ ಮೂಲೆಯಿಂದ 118 ಮೀಟರ್ ದೂರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 03 ಅನ್ನು (N 13 ° 9.051′ E 78 ° 3.689′) ಸೇರುತ್ತದೆ. ಮುಂದುವರೆದು, ಈಶಾನ್ಯಾಭಿಮುಖವಾಗಿ 45 ಮೀಟರ್ ಚಲಿಸಿ ಸದರಿ ಗ್ರಾಮದ ಸರ್ವೆ ನಂ.75ರ ಆಗ್ನೇಯ ಮೂಲೆಯಿಂದ ದಕ್ಷಿಣ ದಿಕ್ಕಿಗೆ 88 ಮೀಟರ್ ಅಂತರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 4 (N 13 ° 9.066′ E 78 ° 3.709′) ಅನ್ನು ಸೇರುತ್ತದೆ. ಮುಂದುವರೆದು, ಈಶಾನ್ಯಾಭಿಮುಖವಾಗಿ 28 ಮೀಟರ್ ಚಲಿಸಿ, ಸರ್ವೆ ನಂ.75ರ ಆಗ್ನೇಯ ಮೂಲೆಯಿಂದ ಆಗ್ನೇಯ ದಿಕ್ಕಿಗೆ 73 ಮೀಟರ್ ಅಂತರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 5 (N 13 ° 9.076′ E 78 ° 3.721′) ಅನ್ನು ಸೇರುತ್ತದೆ. ಮುಂದುವರೆದು, ಈಶಾನ್ಯಾಭಿಮುಖವಾಗಿ 48 ಮೀಟರ್ ಚಲಿಸಿ, ಸರ್ವೆ ನಂ.7ರ ಆಗ್ನೇಯ ಮೂಲೆಯಿಂದ ನೈರುತ್ಯ ದಿಕ್ಕಿಗೆ 83.5 ಮೀಟರ್ ಅಂತರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 6 (N 13 ° 9.092′ E 78 ° 3.741′) ಅನ್ನು ಸೇರುತ್ತದೆ. ನಂತರ, ಪೂರ್ವಾಭಿಮುಖವಾಗಿ 53 ಮೀಟರ್ ಚಲಿಸಿ ನುಗ್ಗಲಾಪುರ ಮತ್ತು ಚಲ್ಲಹಳ್ಳಿ ಗ್ರಾಮಗಳ ಸಾಮಾನ್ಯ ಗಡಿಗೆ ನುಗ್ಗಲಾಪುರ ಸರ್ವೆ ನಂ.7ರ ಆಗ್ನೇಯ ಮೂಲೆಯಿಂದ ದಕ್ಷಿಣಕ್ಕೆ 74 ಮೀಟರ್ ಅಂತರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 7 ಅನ್ನು ಸೇರುತ್ತದೆ.

ಪೂರ್ವ: ನುಗ್ಗಲಾಪುರ ಮತ್ತು ಚಲ್ಲಹಳ್ಳಿ ಗ್ರಾಮಗಳ ಸಾಮಾನ್ಯ ಗಡಿರೇಖೆಯಲ್ಲಿಯೇ ಸ್ಥಾನಿಕ ಬಿಂದು ಸಂಖ್ಯೆ 7 ರಿಂದ ದಕ್ಷಿಣಕ್ಕೆ 134 ಮೀಟರ್ ಚಲಿಸಿ, ಸ್ಥಾನಿಕ ಬಿಂದು ಸಂಖ್ಯೆ 8 (N 13 ° 9.019′ E 78 ° 3.787′) ಅನ್ನು ಸೇರುತ್ತದೆ.

ದಕ್ಷಿಣ : ಗಡಿ ರೇಖೆಯು ಸರ್ವೆ ನಂ.8 ರಲ್ಲಿ ನೈರುತ್ಯಾಭಿಮುಖವಾಗಿ 329 ಮೀಟರ್ ಚಲಿಸಿ, ನುಗ್ಗಲಾಪುರ ಮತ್ತು ನಾಗಲಾಪುರ ಗ್ರಾಮಗಳ ಸಾಮಾನ್ಯ ಗಡಿರೇಖೆಗೆ ನಾಗಲಾಪುರ, ಪೆಮ್ಮಶೆಟ್ಟಿಹಳ್ಳಿ, ಮತ್ತು ನುಗ್ಗಲಾಪುರ ಮೂರು ಗ್ರಾಮಗಳ ಟ್ರೈ ಜಂಕ್ಷನ್ ಮೂಲೆಯಿಂದ ಆಗ್ನೇಯ ದಿಕ್ಕಿಗೆ 178 ಮೀಟರ್ ಅಂತರದಲ್ಲಿ ಸ್ಥಾನಿಕ ಬಿಂದು ಸಂಖ್ಯೆ 9 (N 13 ° 8.905′ E 78 ° 3.651′) ಅನ್ನು ಸೇರುತ್ತದೆ.

ಪಶ್ಚಿಮ : ಗಡಿರೇಖೆಯು ಸ್ಥಾನಿಕ ಬಿಂದು ಸಂಖ್ಯೆ 9 (N 13 ° 8.905′ E 78 ° 3.651′) ರಿಂದ ಸರ್ವೆ ನಂಬರ್ 8 ರಲ್ಲಿ ಉತ್ತರಾಭಿಮುಖವಾಗಿ 257 ಮೀಟರ್ ಅಂತರದಲ್ಲಿ ಪ್ರಾರಂಭಿಕ ಸ್ಥಾನಿಕ ಬಿಂದು ಸಂಖ್ಯೆ 1 (N 13 ° 9.051′ E 78 ° 3.634′) ಅನ್ನು ಸೇರುತ್ತದೆ.

ಷರಾ: ಮೇಲೆ ತಿಳಿಸಿರುವ ಅಕ್ಷಾಂಶ ರೇಖಾಂಶಗಳು ಗಡಿ ವಿವರಣೆಯ ಭಾಗವಾಗಿರುವುದಿಲ್ಲ. ಅವುಗಳು ಅಂದಾಜು ಸ್ಥಳವನ್ನು ಮಾತ್ರ ಸೂಚಿಸುತ್ತವೆ.

<u>ಹಕ್ಕು ಮತ್ತು ಬಾಧ್ಯತೆಗಳು</u>

ಸದರಿ ಕ್ಷೇತ್ರದಲ್ಲಿ ಯಾವುದೇ ಮಾನದಂಡಗಳ ಹಿನ್ನೆಲೆಯಲ್ಲಿ ಹಕ್ಕುಗಳನ್ನು ಕಾಯ್ದಿರಿಸಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಿವಪ್ರಕಾಶ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ ಪರಿಸರ ಮತ್ತು ಜೀವ ಪರಿಸ್ಥಿತಿ ಶಾಸ್ತ್ರ ಇಲಾಖೆ

PR-1044

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು